**ದಿನಾಂಕಃ 30.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ. ಎನ್. ಎಸ್. ಕೆ. ವಕೀಲರಿಂದಃ**

**6.** ನಾನು ಬೆರಳು ಮುದ್ರೆಗಳನ್ನು ದಿಃ19.02.2024 ರಂದು ಪರೀಕ್ಷಿಸಿರುತ್ತೇನೆ. ನಾನು ಬೆರಳು ಮುದ್ರೆಗಳ ಛಾಯಾ ಚಿತ್ರಗಳನ್ನು ನಿವೇದನೆ ಸಲ್ಲಿಸಿ ನಮ್ಮ ಮುಖ್ಯ ಕಛೇರಿಯಲ್ಲಿ ಇರುವ ಸಂಬಂಧಿತ ವಿಭಾಗದಿಂದ ಛಾಯಾ ಚಿತ್ರಗಳನ್ನು ತೆಗೆಸಿ ಪಡೆದಿರುತ್ತೇನೆ. ನಾನು ಛಾಯಾ ಚಿತ್ರಗಳನ್ನು ಯಾವ ಡಿಗ್ರಿವರೆಗೆ Enlarge ಮಾಡಬೇಕೆಂದು ನನ್ನ ನಿವೇದನೆಯಲ್ಲಿ ನಮೂದಿಸಿರುವುದಿಲ್ಲ ಮತ್ತು ಮೌಖಿಕವಾಗಿಯೂ ಸಹ ಕೇಳಿಕೊಂಡಿಲ್ಲ. ಛಾಯಾ ಚಿತ್ರಗಳನ್ನು ಯಾವ ಡಯಾಮೀಟರವರೆಗೆ Enlarge ಮಾಡಿದರೆ ಅವುಗಳನ್ನು ಪರೀಕ್ಷಿಸಬಹುದು ಎಂದು ನನಗೆ ಹೇಳಲು ಬರುವುದಿಲ್ಲ, ಆದರೆ ಸದರಿ ಸಂಬಂಧಿತ ವಿಭಾಗದ ಅಧಿಕಾರಿಗಳು ಬೆರಳು ಮುದ್ರೆಗಳನ್ನು ಪರೀಕ್ಷೆಗೆ ಅನುಕೂಲವಾಗುವ ರೀತಿ ತಾವೆ Enlarge ಮಾಡಿ ನೀಡುತ್ತಾರೆ. ಈ ದಾವೆಯಲ್ಲಿ ಬೆರಳು ಮುದ್ರೆಗಳನ್ನು 4X6 ಡಯಾಮೀಟರನಷ್ಟು Enlarge ಮಾಡಲಾಗಿರುತ್ತದೆ.

**7.** ನಾನು ಬೆರಳು ಮುದ್ರೆಗಳನ್ನು Magnifier Glass ಯಿಂದ ನೋಡಿಲ್ಲ. ನಾನು ಬೆರಳು ಮುದ್ರೆಗಳನ್ನು ಸರಿಯಾರಿ ಪರೀಕ್ಷೆಯನ್ನು ಮಾಡದೇ ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಬೆರಳು ಮುದ್ರೆಗಳನ್ನು ಪರೀಕ್ಷೆ ಮಾಡಿ, ವರದಿ ನೀಡುವ ಅಧಿಕಾರ ಮತ್ತು ಸೂಕ್ತ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಬೆರಳು ಮುದ್ರೆಗಳೆ ಬೇರೆ ಮತ್ತು ನ್ಯಾಯಾಲಯದಲ್ಲಿ ಇಬ್ಬರೂ ವಾದಿಗಳ ಪಡೆದ ಬೆರಳು ಮುದ್ರೆಗಳೆ ಬೇರೆ ಬೇರೆ ಎಂದರೆ ಸರಿಯಲ್ಲ. ನಾನು ಸುಳ್ಳು ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಸಿ-6 ರಲ್ಲಿ ಕಂಡತೆ Enlarge ಮಾಡಿದ ಬೆರಳು ಮುದ್ರೆಗಳಲ್ಲಿ ರೇಖೆಗಳು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಿಸಿ-7 ರಲ್ಲಿ ಸ್ಪಷ್ಟವಾಗಿ ಯಾವ ಆಧಾರದ ಮೇಲೆ ನಾನು ನನ್ನ ವರದಿಯನ್ನು ಸಲ್ಲಿಸಿದ್ದೇನೆ ಎಂದು ನಿಖರವಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡಲೆಂದು ಬೆರಳು ಮುದ್ರೆಗಳನ್ನು ಸರಿಯಾಗಿ ಪರಿಶಿಲನೆ ಮಾಡದೆ ನನಗೆ ಸೂಕ್ತ ಜ್ಞಾನ ಮತ್ತು ಅವಶ್ಯಕ ವಿಧ್ಯಾಭ್ಯಾಸ ಇರದಿದ್ದರೂ ಸಹ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆರಳು ಮುದ್ರೆ ಪರೀಕ್ಷಿಸುವ ಸಮಯದಲ್ಲಿ Oral,

Delta, Core, ಇವುಗಳ ಬಗ್ಗೆ ಬರೆದ ನಂತರವೇ ಉಳಿದ ಬಗ್ಗೆ ವರದಿಯನ್ನು ಬರೆಯಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**